# ದಾದಿಯಮ್ಮಂದಿರಿಗೆ ನಮಸ್ಕಾರ




ಜನ್ಮ ನೀಡಿದ ಮಾತಾಪಿತರು ಹಾಗೂ ಅರಿವನ್ನು ನೀಡುವ ಗುರುವನ್ನು ದೈವವೆನ್ನುತ್ತೇವೆ. ವೈದ್ಯನನ್ನು ನಾರಾಯಣ ಎನ್ನುತ್ತೇವೆ. ಕಣ್ಣಿಗೆ ಕಾಣುವ ಈ ದೈವಗಳ ಸಾಲಿಗೆ 'ನರ್ಸಮ್ಮ'ನೂ ಸೇರಬೇಕು. ಆರೋಗ್ಯ ಶುಶ್ರೂಷಕಿಯರಾದ ಈ ಅಮ್ಮಂದಿರು ರೋಗಿಗಳ ಸೇವೆಯಲ್ಲಿ ಸಾರ್ಥಕ್ಯ ಕಾಣುವವರು. 'ಕೋವಿಡ್ 19' ಮಾರಕ ಸೋಂಕಿನಂತಹ ಸಂದರ್ಭದಲ್ಲೂ ಧೃತಿಗೆಡದೆ ವೃತ್ತಿಧರ್ಮ ಪಾಲಿಸುತ್ತಿರುವ ಮಾತೆಯರಿವರು. 'ದೀಪಧಾರಿ ಮಹಿಳೆ' ಎಂದು ವಿಶ್ವದ ಗೌರವಕ್ಕೆ ಪಾತ್ರವಾಗಿರುವ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವಾದ ಮೇ 12 'ದಾದಿಯರ ದಿನ'ವೂ ಹೌದು. ಮೇ ತಿಂಗಳ ಎರಡನೇ ಭಾನುವಾರ 'ಅಮ್ಮಂದಿರ ದಿನ'. 2020 ನೈಟಿಂಗೇಲ್ ಅವರ ದ್ವಿ ಶತಮಾನೋತ್ಸವ ವರ್ಷವೂ ಹೌದು. ಈ ಎಲ್ಲ ವಿಶೇಷಣಗಳ ನೆಪದಲ್ಲಿ, ಈ ಹೊತ್ತು ಎಲ್ಲರ ಪಾಲಿಗೂ ಅಮ್ಮಂದಿರಾಗಿರುವ ದಾದಿಯರನ್ನು ನೆನೆಯೋಣ, ಕೃತಜ್ಞತೆ ಸಲ್ಲಿಸೋಣ.

■ ಸ್ವಯಂಪ್ರಭಾ